# ‘ಅಮೂಲ್ಯ’ ಸಮಯ

‘ಚೆಲುವಿನ ಚಿತ್ತಾರ’, ‘ಶ್ರಾವಣಿ ಸುಬ್ರಹ್ಮಣ್ಯ’ ಸೇರಿದಂತೆ ಹಲವು ಸಿನಿಮಾಗಳಲ್ಲಿ ನಟಿಸಿ, ಅಭಿನಯದೊಂದಿಗೆ ಮುಗ್ಧತೆಯಿಂದಲೂ ಜನಮನ್ನಣೆ ಪಡೆದುಕೊಂಡಿದ್ದವರು ನಟಿ ಅಮೂಲ್ಯ. ಸಿನಿಮಾಗಳಿಂದ ಬ್ರೇಕ್ ತೆಗೆದುಕೊಂಡಿದ್ದ ಅವರೀಗ ಹೊಸ ಗೆಟಪ್‌ನಲ್ಲಿ ಮರಳುತ್ತಿದ್ದಾರೆ.

‘ಮುಗುಳುನಗೆ’ ಸಿನಿಮಾದಲ್ಲಿ ಕೊನೆಯದಾಗಿ ಕಾಣಿಸಿಕೊಂಡಿದ್ದ ಅಮೂಲ್ಯ ಎಂಟು ವರ್ಷಗಳ ನಂತರ ಮರಳಿದ್ದು, ‘ಪೀಕಬೂ’ ಸಿನಿಮಾ ಮೂಲಕ ಹೊಸ ಹಾದಿಯಲ್ಲಿ ಹೊರಟಿದ್ದಾರೆ.

‘ಶ್ರಾವಣಿ ಸುಬ್ರಹ್ಮಣ್ಯ’ ಸಿನಿಮಾ ನಿರ್ದೇಶಕ ಮಂಜು ಸ್ವರಾಜ್ ಅವರೇ ಈ ಸಿನಿಮಾ ನಿರ್ದೇಶನವನ್ನೂ ಮಾಡುತ್ತಿದ್ದು, ನಟಿ ಅಮೂಲ್ಯ ಅಪರೂಪದ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರುವ ಸುಳಿವು ನೀಡಿದ್ದಾರೆ. ಅಮೂಲ್ಯ ಕೂಡ ಈ ಪಾತ್ರದ ಕುರಿತು ಬಹಳ ಉತ್ಸುಕರಾಗಿದ್ದಾರೆ.

‘ಮದುವೆ ನಂತರ ಸಿನಿಮಾಗಳಲ್ಲಿ ಮಾಡಲಿಲ್ಲ. ಆದರೆ ನಾನು ಇಲ್ಲಿಗೆ ವಾಪಸ್ ಬಂದೇ ಬರುತ್ತೇನೆ ಎಂದು ನನಗೆ ಗೊತ್ತಿತ್ತು. ನನ್ನ ಕುಟುಂಬದ ಕಮಿಟ್‌ಮೆಂಟ್‌ಗಳು ಮುಗಿದ ನಂತರ ಸಿನಿಮಾಗೆ ಮತ್ತೆ ಬರಬೇಕು ಎಂದುಕೊಂಡಿದ್ದೆ. ಮದುವೆ ಹಾಗೂ ಮಕ್ಕಳಾದ ಮೇಲೆ ಸ್ವಲ್ಪ ಸಮಯ ತೆಗೆದುಕೊಂಡೆ. ಆನಂತರ ಮೂರರಿಂದ ನಾಲ್ಕು ಆಫರ್‌ಗಳು ಬಂದವು. ಅವು ಚೆನ್ನಾಗಿದ್ದರೂ ವಿಭಿನ್ನವಾದದ್ದನ್ನು ಎದುರುನೋಡುತ್ತಿದ್ದೆ. ನನಗೆ ಟ್ರಯಲ್ ರನ್ ಮಾಡಲು ಇಷ್ಟವಿರಲಿಲ್ಲ. ಈಗ ಮರಳುವ ಸಮಯ ಬಂದಿದೆ. ಪೀಕಬೂ ಅದಕ್ಕೆ ಉತ್ತಮ ಅವಕಾಶ ಎನಿಸಿದೆ’ ಎಂದು ವಿವರಣೆ ನೀಡಿದ್ದಾರೆ.

ಪರ್ಫಾರ್ಮೆನ್ಸ್ ಆಧರಿತ ಪಾತ್ರ ಇದಾಗಿರುವುದಾಗಿ ಅಮೂಲ್ಯ ಹೇಳಿಕೊಂಡಿದ್ದಾರೆ. ಮತ್ತೆ ಕ್ಯಾಮೆರಾ ಎದುರಿಸುತ್ತಿರುವ ಕುರಿತು ಮಾತನಾಡುತ್ತಾ, ‘ನಿಜ ಹೇಳಬೇಕೆಂದರೆ ಮತ್ತೆ ಕ್ಯಾಮೆರಾ ಎದುರಿಸಲು ಸ್ವಲ್ಪ ಭಯ ಎನಿಸುತ್ತಿದೆ. ಚಿಕ್ಕ ವಯಸ್ಸಿಗೇ ಕ್ಯಾಮೆರಾ ಮುಂದೆ ಬಂದಿದ್ದೆ. ಈಗ ಮತ್ತೆ ಬರುತ್ತಿರುವುದು ಹೊಸತೆನಿಸಿದೆ. ಪ್ರತಿ ವಿಷಯವನ್ನೂ ಮತ್ತೆ ಕಲಿಯಬೇಕಿದೆ. ನಟನೆ, ನೃತ್ಯ, ಫಿಟ್‌ನೆಸ್ ಎಲ್ಲವನ್ನೂ ತಿದ್ದಿ ತೀಡಿಕೊಳ್ಳಬೇಕಿದೆ. ದೈಹಿಕವಾಗಿ ಮಾತ್ರವಲ್ಲ, ನನ್ನ ಆತ್ಮವಿಶ್ವಾಸವನ್ನೂ ಮರಳಿ ಪಡೆಯಬೇಕಿದೆ’ ಎಂದು ಹೇಳಿದ್ದಾರೆ.

ರಿಯಾಲಿಟಿ ಶೋವೊಂದರ ಜಡ್ಜ್ ಕೂಡ ಆಗಿರುವ ಅಮೂಲ್ಯ, ಇದು ಅನಿರೀಕ್ಷಿತವಾಗಿ ತಮಗೆ ಹೇಗೆ ಸಹಾಯ ಮಾಡಿದೆ ಎಂದೂ ವಿವರಿಸಿದ್ದಾರೆ. ‘ನಾನು ಜನರ ನಡುವೆ ತುಂಬಾ ಕಾನ್ಷಿಯಸ್ ಆಗಿರುತ್ತಿದ್ದೆ. ಈ ಶೋ ನನ್ನನ್ನು ಹೆಚ್ಚು ಬೆರೆಯುವಂತೆ ಮಾಡಿತು. ಸಿನಿಮಾಗೆ ಮರಳುತ್ತಿರುವ ಈ ಸಂದರ್ಭದಲ್ಲಿ ಈ ಅನುಭವ ಅವಶ್ಯಕವೂ ಆಗಿತ್ತು’ ಎಂದಿದ್ದಾರೆ. ಅಕ್ಟೋಬರ್ 2ರಿಂದ ಸಿನಿಮಾ ಶೂಟಿಂಗ್ ಆರಂಭಗೊಳ್ಳುತ್ತಿದ್ದು, ಅಮೂಲ್ಯ ತಯಾರಿಯಲ್ಲಿ ತೊಡಗಿದ್ದಾರೆ. ■



# ‘ಹಾರರ್’ ಪೋಷಾಕಿನಲ್ಲಿ ರಮೇಶ್



ಥ್ರಿಲ್ಲರ್ ಹಾರರ್ ಜಾನರ್‌ನ ‘ದೈಜಿ’ ಸಿನಿಮಾ ಟೀಸರ್ ಈಚೆಗೆ ಬಿಡುಗಡೆಗೊಂಡಿದ್ದು, ನಟ ರಮೇಶ್ ಅರವಿಂದ್ ಸಿನಿಮಾದಲ್ಲಿ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ರಮೇಶ್ ಅರವಿಂದ್ ನಟನೆಯ 106ನೇ ಚಿತ್ರ ಇದಾಗಿದ್ದು, ಆಕಾಶ್ ಶ್ರೀವತ್ಸ ನಿರ್ದೇಶನದಲ್ಲಿ ಸಿನಿಮಾ ಮೂಡಿಬರುತ್ತಿದೆ. ಈ ಹಿಂದೆ ರಮೇಶ್ ಅವರು ನಟಿಸಿದ್ದ ‘ಶಿವಾಜಿ ಸುರತ್ಕಲ್’ ಸಿನಿಮಾ ಸರಣಿಯನ್ನು ಆಕಾಶ್ ನಿರ್ದೇಶಿಸಿದ್ದರು. ಇವರ ಕಾಂಬಿನೇಷನ್‌ನ ಮೂರನೇ ಸಿನಿಮಾವಾಗಿ ‘ದೈಜಿ’ ಪ್ರೇಕ್ಷಕರ ಎದುರಿಗೆ ಬರಲು ಸಜ್ಜಾಗುತ್ತಿದೆ.

ಸೂರ್ಯ ಎಂಬ ಪಾತ್ರದಲ್ಲಿ ರಮೇಶ್ ಕಾಣಿಸಿಕೊಳ್ಳುತ್ತಿದ್ದು, ರಾಧಿಕಾ ನಾರಾಯಣ್ ‘ಭೂಮಿ’ ಪಾತ್ರದಲ್ಲಿ ಹಾಗೂ ರಮೇಶ್ ಅವರ ತಮ್ಮನಾಗಿ ನಟ ದಿಗಂತ್ ‘ಗಗನ್’ ಎನ್ನುವ ಪಾತ್ರದಲ್ಲಿ ನಟಿಸಿದ್ದಾರೆ.

‘ಸಾಮಾನ್ಯ ಹಾರರ್ ಚಿತ್ರಗಳಿಗಿಂತ ವಿಭಿನ್ನವಾಗಿ ಈ ಕಥೆಯನ್ನು ಶ್ರೀವತ್ಸ ತೆರೆಗೆ ತಂದಿದ್ದಾರೆ. ದಿಗಂತ್ ಅವರ ಲವಲವಿಕೆ ನನಗೆ ಬಹಳ ಇಷ್ಟ. ಈ ಚಿತ್ರದಲ್ಲಿ ವಿದೇಶದ ಪ್ರಸಿದ್ಧ ಕಲಾವಿದರೊಂದಿಗೂ ನಟಿಸಿದ್ದೇನೆ’ ಎಂದು ಸಂತೋಷದಿಂದ ಹೇಳಿಕೊಂಡಿದ್ದಾರೆ ರಮೇಶ್ ಅರವಿಂದ್. ಈ ವರ್ಷದ ಕೊನೆ ಅಥವಾ 2026ರ ಆರಂಭಕ್ಕೆ ಸಿನಿಮಾ ತೆರೆಕಾಣಲಿದೆ ಎಂದು ಚಿತ್ರತಂಡ ಮಾಹಿತಿ ನೀಡಿದೆ. ■